ಮಾಡಬಹುದು, 1ನೇ ತಾರೀಖು ಮಾಡಬಹುದು, 2ನೇ ತಾರೀಖು ಮಾಡಬಹುದು. Where is the necessity, where is the urgency for this? ಹೀಗೇಕೆ ಮಾಡುತ್ತೀದ್ದೀರಿ?

ಡಾ: ಹೆಚ್.ಸಿ. ಮಹದೇವಪ್ಪ:– ಏಕೆ ಹೀಗೆ ಮಾಡುತ್ತಿದ್ದೀರಿ? It is not correct.

ಶ್ರೀ ಜಗದೀಶ್ ಶೆಟ್ಟರ್ : – ಮಾನ್ಯ ಅಧ್ಯಕ್ಷರೆ, ಈಗಾಗಲೇ ಸುವರ್ಣ ಗ್ರಾಮ ಬಗ್ಗೆ explain ಮಾಡಿ ಹೇಳಿದ್ದೇವೆ.

ಶ್ರೀ ಸಿದ್ದರಾಮಯ್ಯ : – ಮಾನ್ಯ ಅಧ್ಯಕ್ಷರೆ, vote on account time ಮುಗಿದಿಲ್ಲ. Could we not speak on this? ನಾವು walk out ಮಾಡಬಾರದು ಎಂದು ಇದೆಯೇ?

ಶ್ರೀ ಬಸವರಾಜ ಬೊಮ್ಮಾಯಿ : – Set in motion ಆದಾಗ ಮಾತನಾಡುವುದಕ್ಕಾಗುವುದಿಲ್ಲ. ಅದಕ್ಕಿಂತ ಮೊದಲು ಮಾತನಾಡುವ ಹಕ್ಕು ನಿಮಗೆ ಇದೆ. ಆ ಹಕ್ಕನ್ನು ನೀವು ಉಪಯೋಗ ಮಾಡಿಕೊಂಡಿಲ್ಲ ಅಷ್ಟೇ.

ಶ್ರೀ ಸಿದ್ದರಾಮಯ್ಯ : – There is technical aspect.

(ಗೊಂದಲ)

ಶ್ರೀ ಎಸ್.ಎ. ರಾಮದಾಸ್ : How can you go back?

ಶ್ರೀ ಜಗದೀಶ್ ಶೆಟ್ಟರ್ : – ಮಾನ್ಯ ಅಧ್ಯಕ್ಷರೆ, ಈಗಾಗಲೇ ನಾನು explain ಮಾಡಿದ್ದೇನೆ. ಅದು motion move ಆಗಿದೆ.

ಅಧ್ಯಕ್ಷರು : – ಈಗ ವಿಧೇಯಕವನ್ನು ಮಂಡಿಸುವುದು.

ಶ್ರೀ ಸಿದ್ದರಾಮಯ್ಯ : – ನೋಡಿ, ನಾವು ಈ ತರಹದ dictatorial attitude ಅನ್ನು ಪ್ರತಿಭಟನೆ ಮಾಡುತ್ತೇವೆ. We are going to protest.

ಶ್ರೀ ಬಂಡೆಪ್ಪ ಖಾಶೆಂಪೂರ್ : – ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದು ನಿಜ. 3,600 ಕೋಟಿ ಚರ್ಚೆಯಾಗದೆ ಹಾಗೆಯೇ ಮಾಡಿಕೊಂಡು ಹೋದರೆ ಹೇಗೆ..

(ಗೊಂದಲ)

2. ಶಾಸನ ರಚನೆ.

(ಅ) ವಿಧೇಯಕಗಳ ಮಂಡನೆ

1) 2012ನೇ ಸಾಲಿನ ಕರ್ನಾಟಕ ಧನವಿನಿಯೋಗ (ಸಂಖ್ಯೆ – 2) ವಿಧೇಯಕ

ಶ್ರೀ ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿಗಳು) : – ಮಾನ್ಯ ಅಧ್ಯಕ್ಷರೆ, 2012ನೇ ಸಾಲಿನ ಕರ್ನಾಟಕ ಧನವಿನಿಯೋಗ (ಸಂಖ್ಯೆ – 2) ವಿಧೇಯಕವನ್ನು ಮಂಡಿಸುವುದಕ್ಕೆ ಸಭೆಯು ಅನುಮತಿ ನೀಡಬೇಕು.

ಅಧ್ಯಕ್ಷರು : – ಪ್ರಸ್ತಾವನೆಯನ್ನು ಮಂಡಿಸಲಾಯಿತು. ಈಗ ಪ್ರಸ್ತಾವನೆಯನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಶ್ರೀ ಬಂಡೆಪ್ಪ ಖಾಶೆಂಪೂರ್ : – ಮಾನ್ಯ ಅಧ್ಯಕ್ಷರೆ, ನಾವು ಧರಣಿ ಮಾಡುತ್ತೇವೆ.

(ಈ ಹಂತದಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷದ ಸದಸ್ಯರು ಸದನದ ಬಾವಿಗೆ ಬಂದರು)

ಅಧ್ಯಕ್ಷರು : – ಪ್ರಸ್ತಾವನೆ ಹೀಗಿದೆ,

2012ನೇ ಸಾಲಿನ ಕರ್ನಾಟಕ ಧನವಿನಿಯೋಗ (ಸಂಖ್ಯೆ – 2) ವಿಧೇಯಕವನ್ನು ಮಂಡಿಸುವುದಕ್ಕೆ ಸಭೆಯು ಅನುಮತಿ ನೀಡಬೇಕು.

ಪ್ರಸ್ತಾವದ ಪರವಾಗಿರುವವರು **"ಹೌದು"** ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು **"ಇಲ್ಲ"** ಎಂದು ಸೂಚಿಸಬೇಕು.

ಪ್ರಸ್ತಾವ **"ಹೌದು"** ಎನ್ನುವವರ ಪರವಾಗಿದೆ,

ಪ್ರಸ್ತಾವ **"ಹೌದು"** ಎನ್ನುವವರ ಪರವಾಗಿದೆ

ಪ್ರಸ್ತಾವ **ಅಂಗೀಕೃತವಾಗಿದೆ.**

ಈಗ ಮಾನ್ಯ ಮುಖ್ಯಮಂತ್ರಿಯವರು ದಯವಿಟ್ಟು ವಿಧೇಯಕವನ್ನು ಮಂಡಿಸಬೇಕು.

ಶ್ರೀ ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿಗಳು) : – ವಿಧೇಯಕವನ್ನು ಮಂಡಿಸುತ್ತೇನೆ.

ಅಧ್ಯಕ್ಷರು : – ವಿಧೇಯಕವನ್ನು ಮಂಡಿಸಲಾಗಿದೆ.

(ಅನುಬಂಧ–1)

(ಈ ಹಂತದಲ್ಲಿ ಬಾವಿಯಲ್ಲಿದ್ದಂತಹ ಮಾನ್ಯ ಸದಸ್ಯರುಗಳು ಸರ್ಕಾರದ ವಿರುದ್ಧವಾಗಿ ಘೋಷಣೆಯನ್ನು ಕೂಗುತ್ತಿದ್ದರು.)

2) 2012ನೇ ಸಾಲಿನ ಕರ್ನಾಟಕ ಧನವಿನಿಯೋಗ (ಸಂಖ್ಯೆ – 3)